# ಉದಯವಾಣಿ

**Sunday 22nd December 2019**

**RVCE Organized 4th International Conference on Institute of Electrical & Electronics Engineer's**

## ಸಂಶೋಧನೆಗಳು ಸಾಮಾನ್ಯರಿಗೂ ತಲುಪಲಿ



**ಮೈಸೂರು ರಸ್ತೆಯ ಆರ್ ವಿ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣಕ್ಕೆ ಅಭಿವೃದ್ಧಿ ಮತ್ತು ಸಂಶೋಧನಾ ವಿಭಾಗದ ನಿರ್ದೇಶಕ ಮಹೇಶ್.ವಿ ಚಾಲನೆ ನೀಡಿದರು.**

**ಕೆಂಗೇರಿ:** ಆಧುನಿಕ ತಂತ್ರಜ್ಞಾನದ ಅವಿಷ್ಕಾರಗಳು ಹಾಗೂ ಸಂಶೋಧನೆಗಳು ಫಲ ಜನಸಾಮಾನ್ಯರಿಗೂ ತಲುಪುವಂತಾಗಬೇಕು ಎಂದು ಭಾರತ್ ಎಲೆಕ್ಟ್ರಾನಿಕ್ಸ್‌ನ ಬೆಂಗಳೂರು ವಿಭಾಗದ ಅಭಿವೃದ್ಧಿ ಮತ್ತು ಸಂಶೋಧನಾ ವಿಭಾಗದ ನಿರ್ದೇಶಕ ಮಹೇಶ್.ವಿ ಹೇಳಿದರು.

ಮೈಸೂರು ರಸ್ತೆಯ ಆರ್.ವಿ.ತಾಂತ್ರಿಕ ವಿವಿ ಆವರಣದಲ್ಲಿ ಯುಎಸ್‌ಎ ಫ್ಲೋರಿಡಾ ಅಂತಾರಾಷ್ಟ್ರೀಯ ವಿವಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಕಂಪ್ಯೂಟೇಶನಲ್ ಸಿಸ್ಟಮ್ ಮತ್ತು ಮಾಹಿತಿ ತಂತ್ರಜ್ಞಾನದಿಂದ ಎದುರಾಗುವ ಸಮಸ್ಯೆಗೆ ಸುಸ್ಥಿರ ಪರಿಹಾರ' ಕುರಿತು ಇನ್‌ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ ಎಂಜಿನಿಯರ್ಸ್‌ರ 4ನೇ ಅಂತರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಮಾತನಾಡಿದರು.

ದೇಶದಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ ಆದರೆ ಪ್ರತಿಭಾವಂತರಿಗೆ ಸೂಕ್ತ ಸಹಕಾರ, ಪ್ರೋತ್ಸಾಹ, ವೇದಿಕೆ ಕಲ್ಪಿಸುವಲ್ಲಿ ಹಿನ್ನಡೆಯಾಗಿದೆ ಎಂದರು. ಕೌಸ್ತುಭ್ ದೇಶಪಾಂಡೆ, ಪ್ರೊ.ಎಸ್.ಎಸ್.ಐಯ್ಯಂಗಾರ್, ಡಾ.ಪಾಂಡುರಂಗ ಶೆಟ್ಟಿ ಮಾತನಾಡಿದರು. ಡಾ.ಕಲಾಪ್ರಿಯಾ ಕಣ್ಣ, ಕೇಶವ್ ಬಾಪಟ್ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಮಣ್ಯ ಹಾಗೂ ಇತರರು ಭಾಗವಹಿಸಿದ್ದರು.

ಉದಯವಾಣಿ Sun, 22 December 2019
https://epaper.udayavani.c